# ಕಾಡು

ಒಂದಕ್ಕಿಂತ ಹೆಚ್ಚು ಕಾರಣಗಳಿಗಾಗಿ ಗಮನ ಸೆಳೆಯುವ ಕಾದಂಬರಿ ಆಲನ ಹಳ್ಳಿ ಶ್ರೀ ಕೃಷ್ಣ ಅವರ 'ಕಾಡು'.

ಎಂಟು ವರುಷದ ಒಂದು ಮುಗ್ಧ ಗಂಡು ಮಗುವಿನ ಪ್ರಜ್ಞೆಯನ್ನು ಕಂದೀಲನ್ನಾಗಿ ಮಾಡಿಕೊಂಡು ಜೀವನದ ಒಂದು ಮೂಲೆಯ ವಿದ್ಯಮಾನವನ್ನು ಮಗುವಿನ ಮನೋವ್ಯಾಪಾರವನ್ನು ಒಮ್ಮೆಗೇ ಶೋಧಿಸುವ ಈ ಕಾದಂಬರಿ ಅಪ್ರತ್ಯಕ್ಷವಾಗಿ ಅಪ್ರಯತ್ನ ಪುರಸ್ಸರವಾಗಿ, ಸತ್-ಚಿತ್ ಸಂಬಂಧದ ಮೇಲೆ ಕುತೂಹಲಕಾರಿ ಬೆಳಕನ್ನು ಚೆಲ್ಲುತ್ತದೆ.

ಹಾಗೆ ನೋಡಿದರೆ, ಮುಗ್ಧ ಮಗುವೊಂದರ ಪ್ರಜ್ಞೆಯ ಬೆಳಕಿನಲ್ಲಿ ಜೀವನದ ಪದರಗಳನ್ನು ಶೋಧಿಸಿ ಅದರ ಅರ್ಥವನ್ನು ಅರಸುವುದು ಹೊಸ ತಂತ್ರವೇನಲ್ಲ. ಜಗತ್ತನ್ನು ಒಂದು ವಿಶಿಷ್ಟ ಮನೋಧರ್ಮದ ಮೂಲಕ ನೋಡುವುದರಿಂದ ಮೂಡುವ ಚಿತ್ರದ ಅಭಿವ್ಯಕ್ತಿಯೇ ಕಲೆ. ಅಂಥ ಮನೋಧರ್ಮ ಕಾಳಿದಾಸನ 'ಮೇಘದೂತ'ದಲ್ಲಿನಂತೆ ವಿರಹಿಯದಾಗಿರಬಹುದು. ಫ್ರಾನ್ಸ್ ಕಾಫ್ಕನ 'ಟ್ರಯಲ್', ನಂತೆ ಪ್ರತಿಕೂಲಕರ ಪರಿಸರದಲ್ಲಿ ತೊಳಲಾಡುವ ಅಮಾಯಕನದಾಗಿರಬಹುದು. ಅಥವಾ ಟಾಗೂರರ 'ಅಂಚೆ ಮನೆ', ಜಾನ್ ಸ್ಟೀನ್‌ಬೆಕ್ ಅವರ 'ರೆಡ್ ಪೋನಿ', ಡಾ॥ ಯು. ಆರ್. ಅನಂತಮೂರ್ತಿಯವರ 'ಘಟಶ್ರಾದ್ಧ', ಇಲ್ಲವೆ ಆಲನಹಳ್ಳಿ ಕೃಷ್ಣ ಅವರ 'ಕಾಡು' ಈ ಕೃತಿಗಳಲ್ಲಿ ಬಳಸಲಾಗಿರುವ ಮುಗ್ಧ ಮಗುವಿನದಾಗಿರಬಹುದು.

ಕಾಡು ಕಾದಂಬರಿಯ ಕಥೆ ಸಾಕಷ್ಟು ನೇರವಾಗಿದೆ. ಕೊಪ್ಪಲು ಎಂಬ ಒಂದು ಸಣ್ಣ ಗ್ರಾಮದ ಪ್ರತಿಷ್ಠಿತ ರೈತ ಚಂದ್ರೇಗೌಡ ಮತ್ತು ಆತನ ಪತ್ನಿ ಕಮಲಮ್ಮ ಮಕ್ಕಳಿಲ್ಲದ ಮನೆಯಲ್ಲಿ ಆತನ ಅಕ್ಕನ ಮಗನಾದ ಕಿಟ್ಟಿಯನ್ನು ತಂದು ಸಾಕಿಕೊಳ್ಳುತ್ತಾರೆ. ಇನ್ನೊಬ್ಬಳನ್ನು 'ಇಟ್ಟುಕೊಂಡಿರುವ' ಗಂಡನ ಪ್ರೇಮದಿಂದ ವಂಚಿತಳಾದ ಕಮಲಮ್ಮನ ಬರಡು ಬದುಕಿನಲ್ಲಿ ಪ್ರೀತಿಯ ಒಂದು ಆಸರೆಯಾಗಿ ಕಿಟ್ಟಿ ಬೆಳೆಯುತ್ತಿರುತ್ತಾನೆ. ಕಾದಂಬರಿಯಲ್ಲಿ ಚಿತ್ರಿಸಿರುವ ಘಟನೆಗಳನ್ನು ನಿರುಕಿಸುವಾಗ ಅವನ ವಯಸ್ಸು ಎಂಟು. ಚಂದ್ರೇಗೌಡನ ಗ್ರಾಮದ ಹಿರಿಯ ಗೌಡನ ಮತ್ತು ಕೆರೆಮನೆ 'ಬುದ್ಧಿ'ಯವರಾದ ಸೀತಾರಾಮಯ್ಯನವರ ಶಾಸನ ತಲೆತಲಾಂತರದಿಂದ ಬಂದಿದ್ದು, ಗ್ರಾಮ ಜೀವನದ ಸಾಮಾಜಿಕ ಕಟ್ಟಡವನ್ನು ಹಾಗೂ ಅದರ ಮೇಲೆ ನಿಂತ ಮೌಲ್ಯ ನ್ಯಾಯಗಳನ್ನು ರಕ್ಷಿಸುವ ಸಾಧನವಾಗಿ ಇರುತ್ತದೆ. ತ್ರಿಕಾಲಾಬಾಧಿತ ಎನಿಸಿದ ಈ ವ್ಯವಸ್ಥೆಗೆ ಒಬ್ಬ ಹೊಲತಿ ಹಾಗೂ ಹೊಲೆಯನ ವಿವಾಹ ಬಾಹಿರ ಪ್ರೇಮ ಸವಾಲನ್ನು ಒಡ್ಡುತ್ತದೆ. ಈ ಸವಾಲನ್ನು ಎದುರಿಸಲು ಗ್ರಾಮ ಪಂಚಾಯಿತಿಯ ಸಭೆ ಸೇರಿಸಿ, ಅದರ ಮೂಲಕ ಅವರ ಮೇಲೆ 'ನ್ಯಾಯ'ವನ್ನು ಹೇರುವ ಪ್ರಯತ್ನ

ಮಾಡಲಾಗುತ್ತದೆ. ಆ ಪ್ರಯತ್ನದಲ್ಲಿ ಸೋಲು ಕಂಡಾಗ 'ಗ್ರಾಮ ಸ್ವರಾಜ್ಯ'ದ ವರ್ಗವರ್ಣ ಸಾಮರಸ್ಯದ ಕಲ್ಪನಾ ಲೋಕದ ಮಕಮಲ್ ಕೈಚೀಲ ಹಿಂದೆ ಸರಿದು, ಹುಣಸೆ ಸೆಜ್ಜೆ ಪ್ರತ್ಯಕ್ಷವಾಗುತ್ತದೆ. ಗ್ರಾಮದ 'ಹಿರಿಯರ ನ್ಯಾಯ'ವನ್ನು ಒಪ್ಪದ ಹೊಲೆಯ ತಪ್ಪಿತಸ್ಥನನ್ನು ಚಂದ್ರೇಗೌಡರು ಸಾಯಾ ಬೀಳಾ ತರಿಯುತ್ತಾರೆ. ಆದರೆ ಈಗಾಗಲೇ ಗ್ರಾಮದಲ್ಲಿ ಉಳ್ಳವರ ನಡುವೆಯೇ ಬಿರುಕು ಬಂದು ಗ್ರಾಮ ಜೀವನದ ಅಡಿಪಾಯ, ಬಿಂಕ ಸಡಿಲಿದೆ. ಆಳುಮಗನೊಬ್ಬ ತನ್ನ ಇಷ್ಟ ಬಂದಲ್ಲಿ ದುಡಿಯುವ, ತನ್ನ ಇಷ್ಟ ಬಂದವಳನ್ನು ಪ್ರೀತಿಸುವ ವ್ಯಷ್ಟಿವಾದ ತಲೆಯೆತ್ತಿ, ಅನಾದಿಕಾಲದಿಂದ ನಡೆದು ಬಂದಿದ್ದು, ದೈವನಿಯಾಮಕ ಎನಿಸಿದ್ದ ಸಮಷ್ಟಿವಾದದ ಬುಡಕ್ಕೆ ಕೊಡಲಿ ಬಿಟ್ಟು ಹಾಕುತ್ತದೆ. ಈ ಬಿರುಕು ಮರಾಮತ್ತಿನ ಹಂತ ಮೀರಿ ಎರಡು ಬಣಗಳ ನಡುವೆ ಹಿಂಸೆ ರಾಗದ್ವೇಷದ ಪ್ರಕರಣಗಳಾಗಿ ಪರಿಣಮಿಸಿ ಗ್ರಾಮ ಸ್ವರಾಜ್ಯದ ಕಟ್ಟಡ ನುಚ್ಚುನೂರಾಗಿ ಗ್ರಾಮಕ್ಕೆ ಹೊರಗಿನ ಅಂಶವಾದ ಪೋಲೀಸ್ ಪ್ರವೇಶದ ಮೂಲಕ ಹೊಸ ಬಗೆಯ 'ಕಾನೂನು ವ್ಯವಸ್ಥೆಗೆ' ಎಡೆ ಮಾಡಿಕೊಡುತ್ತದೆ.

'ಕಾಡು'ವಿನಲ್ಲಿ ಕಿಟ್ಟಿಯ ಪ್ರಜ್ಞೆಗೆ ಕಾಣಸಿಗುವ ದರ್ಶನದಂತೆ ಜಗತ್ತು 'ಮಾಯೆ' ಅಲ್ಲ, 'ಮಿಥ್ಯ' ಅಲ್ಲ, 'ಸತ್ಯ'ವೂ ಅಲ್ಲ. ಬರೇ ಕಾಡು. ಪಂಚೇಂದ್ರಿಯಗಳ ಮೂಲಕ 'ಚಿತ್ತಕ್ಕೆ' 'ಸತ್ತಿ'ನಿಂದ ಅಲೆಅಲೆಯಾಗಿ ನುಗ್ಗುವ ಕಚ್ಚಾ ಮಾಹಿತಿಯನ್ನೂ ಸಂಕೇತಗಳನ್ನೂ ತರ್ಕಬದ್ಧವಾದ ಅರಿವಾಗಿ ಸಂಕಲಿಸುವ, ಮರಳಿನಂತಹ ಇಂದ್ರಿಯಾ ನುಭವವನ್ನು ಅರ್ಥಪೂರ್ಣ ರಸಾಯನವಾಗಿ ಸಮಗ್ರೀಕರಿಸುವ ಸಂಕೀರ್ಣವಾದ ವ್ಯಾಖ್ಯಾನ ಶಕ್ತಿಯ ಅಭಾವದಿಂದಾಗಿ ವ್ಯಕ್ತಿಗಳ, ವಸ್ತುಗಳ ಹಾಗೂ ಘಟನೆಗಳ ಪರಸ್ಪರ ಸಂಬಂಧ, ತಾಳೆ ಮತ್ತು ಒಟ್ಟು ಅರ್ಥ ಕಾದಂಬರಿಯ ಉದ್ದಕ್ಕೂ ಮುಗ್ಧ ಮಗುವಿನ ತರ್ಕ ಶಕ್ತಿಯನ್ನು ಅಣಕಿಸುತ್ತಾ ಹೋಗುತ್ತದೆ. ಆದರೆ ಮಗುವಿನ ಪಂಚೇಂದ್ರಿಯಗಳು ತೆರೆದಿದ್ದು, ಇಂದ್ರಿಯಾನುಭವ ಉತ್ಕಟವಾಗಿದೆ. ಪ್ರಾಯಶಃ ಮಕ್ಕಳಲ್ಲಿ ಮೊದಮೊದಲು ಇಂದ್ರಿಯಾನುಭವ ತೀವ್ರವಾಗಿದ್ದು, ವಯಸ್ಸಾದಂತೆಲ್ಲಾ ಈ ತೀವ್ರತೆ ಅನುಭವದ ಬೌದ್ಧಿಕ ವ್ಯಾಖ್ಯಾನಕ್ಕೆ ತಲೆ ಬಾಗುತ್ತದೆಂದು ಕಾಣುತ್ತದೆ.

ಕಾದಂಬರಿಯಲ್ಲಿ ಕಿಟ್ಟಿಯು ಪಂಚೇಂದ್ರಿಯಗಳ ಮೂಲಕ ಗ್ರಹಿಸುವ ಅನುಭವ ಹೀಗೆ ಹಚ್ಚ ಹಸುರಾಗಿದೆ.

"ನಾಳೆ ಹಬ್ಬಕ್ಕೆ ಈಗಾಗಲೇ ಮನೆ ತುಂಬಾ ಸಡಗರದ ಸಿದ್ಧತೆಯು ನಡೆಯು ತ್ತಿದ್ದುದನ್ನು ಕಂಡ ಕಿಟ್ಟಿಗೆ ತುಂಬಾ ಖುಷಿಯಾಗಿತ್ತು. ಬಾಗಿಲು ಕಂಬಗಳಿಗೆಲ್ಲಾ ನೀಲಿ ಬಣ್ಣ ಹಚ್ಚಿತ್ತು. ಕಿಟ್ಟಿ ಬಾಗಿಲು ಮುಟ್ಟಿ ನೋಡಿದ. ಇನ್ನೂ ಚೆನ್ನಾಗಿ ಒಣಗದೇ ಇದ್ದ ಬಣ್ಣ ಕೈಗೆ ಅಂಟಿಕೊಂಡಿತು. ಮನೆಯೊಳಗೆ ಕಾಲಿಟ್ಟ ತಕ್ಷಣ ಗೋಡೆಗಳಿಗೆಲ್ಲಾ ಬಳಿದಿದ್ದ ಸುಣ್ಣದ ವಾಸನೆ ರಪ್ಪನೆ ಮೂಗಿಗೆ ಬಡಿಯಿತು."

"ಲಾಟೀನು ಬೆಳಕಿನಲ್ಲಿ ಜಗಲಿ ಕೆಳಗೆ ಕಟ್ಟಿದ್ದ ಎತ್ತುಗಳ ಕೋಡಿಗೆ ಲೋಂಪಿ ಕೆಂಪು ಮತ್ತು ನೀಲಿ ಬಣ್ಣ ಬಳಿಯುತ್ತಿದ್ದ."

"ಸಿಳ್ಳೆ, ಲೋಂಪಿ, ಎತ್ತುಗಳ ಕೋಡಿಗೆ ಕೆಂಪು ನೀಲಿ ಬಣ್ಣ ಬಳಿದು ಚೆಂಡು ಹೂ, ಕಕ್ಕೆ ಹೂ ಸರ ಕೋಡು ಕೊರಳಿಗೆ ಕಟ್ಟಿದ್ದರು. ಜಗಲಿ ಕಂಬಗಳಿಗೆ ಮಾವಿನ ಸೊಪ್ಪು ಕಟ್ಟಿತ್ತು."

"ಮಂತ್ರದವನು ಒಂದೇ ಉಸುರಿಗೆ ಮಂತ್ರ ಹೇಳುತ್ತಾ ಲೋಂಪಿಗೆ ಕೋಳಿ ಹಿಡಿದುಕೊಳ್ಳಲು ಹೇಳಿ ಚೂರಿಯನ್ನು ಒಂದು ಸಲ ಕಣ್ಣಿಗೊತ್ತಿ ಚೊರ ಚೊರ ಕೋಳಿ ಕತ್ತು ಕೊಯ್ದು, ಅದರ ರಕ್ತವನ್ನೆಲ್ಲಾ ಗೋಬೆ ನಾಲಿಗೆಗೆ ಹಿಡಿದ. ಮಚ್ಚಿ ನಿಂದ ಒಂದೇ ಏಟಿಗೆ ಕಾಯಿ ಹೋಳು ಮಾಡಿ ದಾಂ ಧೂಂ ಎಂದಾಗ ಕಿಟ್ಟಿ ಸೀರೆ ಯೊಳಗೆ ಮುದುರಿದ."

"ಗಂವೆನ್ನುವ ಪಾಳು ಬಾವಿಯ ಬಾಗೆ ಮೌನ ತುಂಬಿದ ಹಟ್ಟಿಯೊಳಗೆ ಕಾಲಿಟ್ಟಾಗ ತನ್ನ ಹೆಜ್ಜೆ ಶಬ್ದಕ್ಕೆ ಬೆಚ್ಚಿದ."

"ಕಟುಂ ಕಟುಮೆಂದು ಸಕ್ಕರೆ ಕಡ್ಡಿ ಕಡಿಯುತ್ತಾ ಅತ್ತೆ ಹಿಂದೆ ನಡೆದ."

"ಅಡುಗೆ ಮನೆಯಲ್ಲಿ ಮಣೆ ಹಾಕಿ ಕೂರಿಸಿ ಬಿಸಿ ಬಿಸಿ ಕಡುಬು ಕೊಟ್ಟು ಇಷ್ಟು ದಪ್ಪ ಬೆಣ್ಣೆ ಹಾಕಿದಾಗ ಕಿಟ್ಟಿಗೆ ಒಂದು ಕ್ಷಣದಲ್ಲೆ ಎಲ್ಲ ಮರೆತಂತಾಗಿ ಲೊಚ್ಚೆ ಹಾಕುತ್ತಾ ತಿನ್ನತೊಡಗಿದ."

ಇಂದ್ರಿಯ ಗೋಚರವಾಗಿ ಮನಃಪಟಲದ ಮೇಲೆ ಇಷ್ಟು ಪರಿಣಾಮಕಾರಿ ಯಾಗಿ ಮೂಡಿ ಮುದ್ರೆ ಒತ್ತುವ ಅನುಭವವನ್ನು ಶ್ರೀ ಕೃಷ್ಣ ಓದುಗನ ಮನಸ್ಸನ್ನು ಸೂರೆ ಮಾಡುವಂತೆ ಕಾದಂಬರಿ ಉದ್ದಕ್ಕೂ ಸೆರೆಹಿಡಿದಿದ್ದಾರೆ. ಇಡೀ ಕಾದಂಬರಿ ಇಂಥ ಸುಂದರ ಶಬ್ದ ಚಿತ್ರಗಳಿಂದ ಕಂಗೊಳಿಸುತ್ತದೆ.

ಆದರೆ ಈ ಉತ್ಕಟ ಇಂದ್ರಿಯಾನುಭವ ಮಗುವಿನ ಮನಸ್ಸಿನಲ್ಲಿ ಸುವ್ಯವಸ್ಥಿತ ವಾದ ತಾರ್ಕಿಕವಾದ ನಿರಾಕಾರವಾದ ಅರಿವಾಗದೇ 'ಕಾಡು' ಆಗಿ ಮಾತ್ರ ಉಳಿ ಯುತ್ತದೆ.

'ಬಾವು ಒಡೆದು ಕೀವು ಸೋರಿ ನಾಗಿಯ ಅಜ್ಜ ಸತ್ತು ಹೋಗಿದ್ದು, (ಸಾಯೋದು ಅಂದ್ರೇನು ಗೊತ್ತದ?) ದೀಪಾವಳಿ ಹಬ್ಬದ ಹಿಂದಿನ ರಾತ್ರಿ ಹಾಳು ಗುಡಿ ಹಿಂದೆ ಪೂಜೆ ಹಾಕಿಸಿದ್ದು (ಕಿಟ್ಟಿಗೆ ಏನಂತ ಅರ್ಥವಾಗಲಿಲ್ಲ) ಗೌರಿ ಕಡಸು ಸಿಡಿಮದ್ದು ಕಡಿದು ಅರ್ಧ ಬಾಯೇ ಕಳಚಿ ಮಾಂಸದ ಮುದ್ದೆಯಾಗಿ ನೇತಾಡುವುದು (ಕೊಟ್ಟಿಗೆ ಚರಣೆ ಮರದ ಮೇಲೆ ಕಣ್ಣಲ್ಲಿ ನೀರು ತುಂಬಿ ಕಲ್ಲಾಗಿ ಕೂತ) ಪೋಲೀಸರು ಮಾವನನ್ನು ಕರೆದುಕೊಂಡು ಹೋಗುತ್ತಿರುವುದು (ಅವನಿಗೆ ಯಾಕಾದರೂ ಮಾವ ನನ್ನು ಪೋಲೀಸರು ಕರೆದುಕೊಂಡು ಹೋಗುತ್ತಿದ್ದಾರೋ ತಿಳಿಯಲಿಲ್ಲ) ಕೆಂಚನಿಗೆ ಮಾವ ಹುಣಿಸೆ ಸೆಜ್ಜೆಯಿಂದ ರಕ್ತ ಬರುವ ಹಾಗೆ ಹೊಡೆದದ್ದು (ಕಿಟ್ಟಿಗೆ ಕರುಳು ಬಾಯಿಗೆ ಬಂದಂತಾಗಿ ಬಿಟ್ಟಿತ್ತು) ಕಲ್ಯಾಣಿ ಹೊಲೇರ ಹನುಮನ ಜೊತೆ ಓಡಿ ಹೋದದ್ದು (ಕಿಟ್ಟಿಗೆ ಇದು ವಿಚಿತ್ರವೆನಿಸಿತ್ತು) ಮೊಣ್ಣನನ್ನು ಕಿರುಬ ಮರದಡಿ

ತಿಂದು ಹಾಕಿದ್ದು (ಅದನ್ನು ಕಂಡು ಕಿಟ್ಟಿ ಭಯದಿಂದ ಸಮೀಪ ಹೋಗದೇ ಸ್ವಲ್ಪ ಹೊತ್ತು ನಿಂತಿದ್ದವನೇ ನಾಗಿಯ ಹಟ್ಟಿಗೆ ಹೊರಟು ಬಂದ) ಗುಡಿ ಅಯ್ನೋರು ಸಾವಿತ್ರಮ್ಮ ನೇಣು ಹಾಕಿಕೊಂಡು ಸತ್ತದ್ದನ್ನ ಬಿಕ್ಕುತ್ತಾ ಹೇಳಿದ್ದು (ಮಲಗಿದ್ದಲ್ಲಿಯೇ ಬೆವರಿದ, ನಡುಕ ಉಂಟಾಯಿತು, ಅತ್ತೆಯನ್ನು ಗಟ್ಟಿಯಾಗಿ ತಬ್ಬಿ ಮಲಗಿಬಿಟ್ಟ) ಧಗಧಗ ಉರಿಯುವ ರಾಗಿ ಮೆದೆಗಳು (ಕಣ್ಣು ಮುಚ್ಚಿ ಕಿಟ್ಟನೆ ಕಿರುಚಿ ಅತ್ತೆ ಸೀರೆ ಯೊಳಕ್ಕೆ ಮುದುಡಿದ) ಆಳು ಕೂಗಿನ ಹಕ್ಕಿ ಕಥೆ (ಕಥೆ ಹೇಳುವಾಗ ಕಿಟ್ಟಿಯ ಮೈ ಮೇಲೆ ಮುಳ್ಳುಗಳೇಳುತ್ತಿದ್ದವು) ರಕ್ತ ಚೆಲ್ಲಾಡಿದ ಹೊಸೂರಿನ ಓಕಳಿ (ಕಿಟ್ಟಿಗೆ ತಾನು ನಿಜವಾಗಿಯೂ ರಾಕ್ಷಸರ ಲೋಕಕ್ಕೆ ಬಂದೆ ಅನ್ನಿಸಿ ಬಿಟ್ಟಿತ್ತು) ಕಾಡಿನೊಳಗಿಂದ ನುಗ್ಗಿ ಬಂದ ರಾಕ್ಷಸರು (ಕಿಟ್ಟಿಯ ಮುಸುಡಿ ಜಬ್ಬಿಯಾಗುವ ಹಾಗೆ ಹಿಂಡಿ ಹಿಡಿದು ಮೇಲೆತ್ತಿಕೊಂಡು ಅಲ್ಲೇ ಇದ್ದ ಹೂವಿನ ಮರದಡಿಯತ್ತ ನಡೆದ) ಅತ್ತೆಯ ತೊಡೆಯ ರಕ್ತ (ಕಿಟ್ಟಿಯ ಕಣ್ಣುಗಳಲ್ಲಿ ರಕ್ತ ತುಂಬಿಕೊಂಡಿತು)."

ಈ ವಿವಿಧ ಘಟನೆಗಳನ್ನು ರೂಪಿಸುವ ಅಂಶಗಳಲ್ಲಿ ಯಾವುದರಲ್ಲಿಯೂ ಪರಸ್ಪರ ಹೊಂದಾಣಿಕೆ ಇಲ್ಲ; ಕಿಟ್ಟಿಗೆ ಎಟುಕುವ ಅರ್ಥವಿಲ್ಲ. ಅವನ ಮನಸ್ಸಿನ ಮೇಲೆ ಮೇಲಿಂದ ಮೇಲೆ ಅಪ್ಪಳಿಸುವ ಇಂಥ ಅನುಭವದ ಬಗ್ಗೆ ಪ್ರತಿಕ್ರಿಯೆ ಕೇವಲ ಭೀತಿ, ವಿಹ್ವಲತೆ ಮತ್ತು ಅಸಹಾಯಕತೆ. ಜಗತ್ತು ಕಾಡು ಆದರೆ ಅದರ ಬಗ್ಗೆ ಅರಿವು ಗೊಂದಲ ಆಗುತ್ತದೆ. ಆಗ ಅದಕ್ಕೆ ಪ್ರತಿಕ್ರಿಯೆ ದಿಗ್ಭ್ರಮೆ.

ಈ ಮಗುವಿನ ಪ್ರಜ್ಞೆ ಮುಗ್ಧವಾದುದಾದರೂ ಅದಕ್ಕೆ ಒಂದು ಸಾಮಾಜಿಕ ದೃಷ್ಟಿಕೋನ, ವರ್ಗ, ವರ್ಣಗಳ ಅಕ್ಷಾಂಶ, ರೇಖಾಂಶಗಳಿವೆ. ಅದು ದೇಶ ಕಾಲಾತೀತವಾದ 'ಶುದ್ಧ' ಪ್ರಜ್ಞೆಯಲ್ಲ. ದೇಶ ಕಾಲದಿಂದ ನಿರ್ಣೀತವಾದ ಸಾಪೇಕ್ಷ ಪ್ರಜ್ಞೆ. ಅದರ ಅನುಭವಕ್ಕೆ ಬರುವುದು ಸಾಪೇಕ್ಷ ಸತ್ಯ. ಹುಟ್ಟಿದ ಮಗುವಿನ ಮನಸ್ಸನ್ನು ಅದರ ಪರಿಸರ ಕಡೆದು ರೂಪಿಸಿ, ಅದಕ್ಕೆ ಕೆಲವು ನಂಬಿಕೆ ಗಳನ್ನು, ಮೌಲ್ಯಗಳನ್ನು ನೀಡುತ್ತದೆ. ಇಲ್ಲಿ ಕಿಟ್ಟಿಯ ಪ್ರಜ್ಞೆ ಕೊಪ್ಪಲು ಗ್ರಾಮದ ವರ್ಗ, ವರ್ಣ ಸಮಾಜದಲ್ಲಿ ಹತ್ತಿಪ್ಪತ್ತು ಸಂಸಾರಗಳನ್ನು 'ಕಾಪಾಡುತ್ತಿದ್ದ' ನೂರೈವತ್ತು ಪಲ್ಲ ರಾಗಿ ಬೆಳೆಯುತ್ತಿದ್ದ ಗೌಡರ ಮನೆತನದ ಮಗುವಾಗಿದ್ದುದರಿಂದ ದಕ್ಕಿದ್ದು.

ಈ ಪ್ರಜ್ಞೆಗೆ ಆಳು ಮಕ್ಕಳು ಕೊಟ್ಟಿಗೆಯಲ್ಲೇ ತಟ್ಟೆ ಇಟ್ಟುಕೊಂಡು ಕಡಬು "ಸುರಿಸಿ" ಕೊಂಡು ತಿನ್ನುವುದು, ಗೌಡರು ಎಷ್ಟೇ ಆಸ್ತಿವಂತರಾದರೂ ಕೆರೆಮನೆ ಸೀತಾರಾಮಯ್ಯನವರನ್ನು "ನೀವೇ ಇಚಾರ ಮಾಡಿ ಬುದ್ಧಿ" ಎಂದು ಸಂಬೋಧಿಸುವುದು, ವಯಸ್ಕನಾದ ಆಳು ಮಗ ಸಿಳ್ಳ ಕಿಟ್ಟಿಯನ್ನು "ಕಿಟ್ಟಪ್ಪರೇ" ಎಂದು ಮಾತನಾಡಿಸುವುದು, ಅವನು ಸಿಳ್ಳನನ್ನು "ಮಾಡಿಕೊಡ್ತೀನೋ" ಎನ್ನುವುದು ಹಾಗೂ ಆಳು ಮಗಳು ಭೋಗಿಯನ್ನು ಕಿಟ್ಟಿ "ನಾಯಿ ಮುಂಡೆ" ಎಂದು ಬಯ್ಯುವುದು—ಕೊಪ್ಪಲಿನ ಸಮಾಜದ ಮೇಲು ಕೀಳುಗಳ ಪ್ರತೀಕವಾಗಿ ಸ್ವಾಭಾವಿಕವೆನಿಸಿದ ಮೌಲ್ಯಗಳು, ರೂಢಿ, ರಿವಾಜುಗಳು.

ಕೊಪ್ಪಲು ಗ್ರಾಮದ ಪಂಚಾಯಿತಿಯ ಮೂಲಕ ದೊರೆಯುವ ನ್ಯಾಯವನ್ನು ಬಿಚ್ಚಿಡುವಲ್ಲಿ ಕಾದಂಬರಿ ಅಂತರ್ದೃಷ್ಟಿಯನ್ನು ಸಮಾಜ ಶಾಸ್ತ್ರದ ನಿಖರವಾದ ವರ್ಣನಾ ಕೌಶಲವನ್ನು ಒಮ್ಮೆಲೇ ಪ್ರದರ್ಶಿಸುತ್ತದೆ. ಗ್ರಾಮದಲ್ಲಿ ನ್ಯಾಯ ನಿರ್ಧರಿಸುವ ಹಕ್ಕನ್ನು ಪಡೆದ ಹತ್ತು ಸಮಸ್ತರು ಹಾಗೂ ಸಾಮಾನ್ಯ ಗ್ರಾಮಸ್ತರು ಕೂಡುವ ನೆಲದ ಏರು ತಗ್ಗುಗಳಲ್ಲಿ ದೂರ ಸನಿಹಗಳಲ್ಲಿ ಅವರ ವರ್ಗ ವರ್ಣಗಳು ಪ್ರತಿಬಿಂಬಿಸುತ್ತವೆ. ಹತ್ತಾರು ಶತಮಾನಗಳಲ್ಲಿಯೂ ಬದಲಾಗದ ಗ್ರಾಮ ಜೀವನದ ನ್ಯಾಯ ಸಂಹಿತೆಯ ಮೋಹಕವಾದ ಹಾಗೂ ನಿಖರವಾದ ಸ್ತಬ್ಧ ಚಿತ್ರ ಇದು. ಈ ಹಳ್ಳಿ ಕೊಪ್ಪಲಿನ "ನ್ಯಾಯ" ಸುತ್ತೆಲ್ಲಾ ಹೆಸರಾಗಿದೆ—ನ್ಯಾಯ ಅಂದ್ರೆ ಕೊಪ್ಪಲು ನ್ಯಾಯ ಹೇಳು ಅಂತ ಈ ನ್ಯಾಯ ಮಾಡಲು ಚಾವುಡಿ ಜಗಲಿಗಳ ಮೇಲೆ ದೊಡ್ಡ ಗೌಡರು, ಚಂದ್ರೇಗೌಡರು, ನಿಂಗಪ್ಪಣ್ಣನವರು, ಭೂ